






## ಬೆರಗು ಬೆಡಗಿನ ಸಾಂಬಾಡ್ರೋಮ್

ರಿಯೊ ನಗರದಲ್ಲಿನ ಸಾಂಬಾಡ್ರೋಮ್‌ನಲ್ಲಿ ಕಾರ್ನಿವಲ್ ಅಂಗವಾಗಿ ನಡೆಯುವ ಬೃಹತ್ ಪರೇಡ್ (ಮೆರವಣಿಗೆ) ವೀಕ್ಷಣೆಗೆ ಲಕ್ಷಾಂತರ ಮಂದಿ ಜಮಾಯಿಸುತ್ತಾರೆ. ರಾತ್ರಿಯಿಡೀ ನಡೆಯುವ ಈ ಪರೇಡ್‌ನಲ್ಲಿ ಪ್ರಖ್ಯಾತ ಸಾಂಬಾ ಶಾಲೆಗಳ ತಂಡಗಳು ಭಾಗಿಯಾಗುತ್ತವೆ. ಒಂದು ವರ್ಷದಿಂದ ಮಾಡಿರುವ ಸಿದ್ಧತೆಗಳಿಂದ ತಮ್ಮೆಲ್ಲಾ ಪ್ರತಿಭೆಯನ್ನು ದೇಸೀ ನೃತ್ಯ, ವೇಷಭೂಷಣ, ಸಂಗೀತ, ಕಲಾ ಪ್ರದರ್ಶನದ ಮೂಲಕ ಪ್ರದರ್ಶನ ಮಾಡಿ ಚಾಂಪಿಯನ್‌ಶಿಪ್‌ಗಾಗಿ ಪೈಪೋಟಿ ನಡೆಸುವರು. ಒಂದೊಂದು ತಂಡದಲ್ಲಿ ಸಾವಿರಾರು ಮಂದಿ ಇರುತ್ತಾರೆ. ಎಲ್ಲರ ಸಂಯೋಜಿತ ನೃತ್ಯ ಬೆರಗನ್ನುಂಟು ಮಾಡುತ್ತದೆ.

70 ಸಾವಿರ ಮಂದಿ ಕುಳಿತುಕೊಳ್ಳಬಹುದಾದ ಸಾಂಬಾಡ್ರೋಮ್‌ನ 700 ಮೀಟರ್ ಉದ್ದದ ಹಾದಿಯಲ್ಲಿ ಒಮ್ಮೆಗೆ ಒಂದು ಸಾವಿರಕ್ಕೂ ಹೆಚ್ಚು ಮಂದಿ ತಮ್ಮ ಕಲಾ ಪ್ರದರ್ಶನ ನೀಡುವುದನ್ನು ನೋಡುವುದೇ ಕಣ್ಣಿಗೆ ಹಬ್ಬ. ಕಳೆದ ಬಾರಿ 12 ಸಾಂಬಾ ಶಾಲೆಗಳು 'ಕಾರ್ನಿವಲ್ ಚಾಂಪಿಯನ್'ಗಾಗಿ ಸ್ಪರ್ಧಿಸಿದ್ದವು. ಥೇಟ್ ಫುಟ್‌ಬಾಲ್ ಟೀಮ್‌ಗಳಿಗಿದ್ದಂತೆ ಈ ತಂಡಗಳಿಗೂ ಬೆಂಬಲಿಗರು, ಪ್ರೋತ್ಸಾಹಕಾರರು ಇರುತ್ತಾರೆ.

ರಿಯೊ ನಗರದಲ್ಲಿ 120 ಸಾಂಬಾ ಶಾಲೆಗಳಿವೆ. ಇವುಗಳಲ್ಲಿ ಆಯ್ದ ವಿಶೇಷ ತಂಡಗಳು ಮಾತ್ರ ಚಾಂಪಿಯನ್‌ಶಿಪ್‌ಗಾಗಿ ಪೈಪೋಟಿ ನಡೆಸುತ್ತವೆ. 75 ನಿಮಿಷದಲ್ಲಿ ಸಾಂಬಾಡ್ರೋಮ್‌ನ ಹಾದಿಯಲ್ಲಿ ಸಾಗಿ ಸಂಗೀತ ಮತ್ತು ನೃತ್ಯದ ಮೂಲಕ ಕಥೆಯೊಂದನ್ನು ಹೇಳುವ ತಮ್ಮ ಪ್ರತಿಭಾ ಪ್ರದರ್ಶನದಿಂದ ಅವರು ಜನರು ಹಾಗೂ ತೀರ್ಪುಗಾರರನ್ನು ಮೆಚ್ಚಿಸಬೇಕು. ಅದಕ್ಕಾಗಿ ಒಂದು ವರ್ಷ ಪರಿಶ್ರಮ ಮತ್ತು ಲಕ್ಷಾಂತರ ಡಾಲರ್ ಹಣ ಖರ್ಚು ಮಾಡುತ್ತಾರೆ. ಸಾಮಾಜಿಕ, ರಾಜಕೀಯ, ಐತಿಹಾಸಿಕ ಅಥವಾ ಪರಿಸರ ವಿಚಾರವಾಗಿ ವಿಷಯವನ್ನು ಆಯ್ದು ಕಥೆಯ ರೂಪದಲ್ಲಿ ಪ್ರದರ್ಶಿಸುವರು. ಸಾಂಬಾಡ್ರೋಮ್‌ನಲ್ಲಿ ಕುಳಿತು ಈ ಪರೇಡ್ ವೀಕ್ಷಿಸಲು ಟಿಕೇಟ್ ಮೌಲ್ಯ 14 ಡಾಲರ್‌ನಿಂದ ಹಿಡಿದು 400 ಡಾಲರ್‌ವರೆಗೂ ಇರುತ್ತದೆ.

## ರಸ್ತೆಯಲ್ಲೆಲ್ಲ ಸಂಭ್ರಮಾಚರಣೆ

ಹಬ್ಬದ ನಿಜವಾದ ಆಚರಣೆ ಅಥವಾ ಪರೇಡ್ ಸಾಂಬಾಡ್ರೋಮ್‌ನಲ್ಲಿ ನಡೆದರೂ, ಪ್ರತಿಯೊಂದು ರಸ್ತೆಯಲ್ಲಿಯೂ ವಾದ್ಯಗೋಷ್ಠಿ, ಕುಣಿತ, ಕುಡಿತ, ವಿಚಿತ್ರ ವೇಷಭೂಷಣ ಧರಿಸಿರುವ ಜನರ ಓಡಾಟ ಹಗಲೂ ರಾತ್ರಿ ನಡೆಯುತ್ತಿರುತ್ತವೆ. ಬ್ರೆಜಿಲ್‌ಗೆ ಕಳೆದ ಬಾರಿಯ ಕಾರ್ನಿವಲ್‌ನಿಂದಾಗಿ 1,800 ದಶಲಕ್ಷ ಡಾಲರ್ ಹಣ ಹರಿದು ಬಂದಿದೆ ಎಂದು ಅಂದಾಜಿಸಲಾಗಿದೆ. ಒಂದು ರೀತಿಯಲ್ಲಿ ದೇಶದ ಆರ್ಥಿಕ ಪ್ರಗತಿಯೂ ಈ ಕಾರ್ನಿವಲ್ ಮೂಲಕ ಆಗುತ್ತದೆ.

ಪ್ರತಿಕ್ರಿಯಿಸಿ: feedback@sudha.co.in